ಎಂದು ರೇಗಿಸುತ್ತಿದ್ದರು. ನಾನು ಕುಸಿದುಹೋಗಿದ್ದೆ. ಆಗ ನನ್ನಲ್ಲಿ ಧೈರ್ಯ ತುಂಬಿದ್ದು ಅಣ್ಣಾವ್ರ 'ಮಣ್ಣಿನ ಮಗ', 'ಎಮ್ಮೆ ತಮ್ಮಣ್ಣ' ಮುಂತಾದ ಚಿತ್ರಗಳು. ಮುಂದೆ ನನ್ನ ಕಥೆಗಳನ್ನು ಆಧರಿಸಿ 'ಯುದ್ಧ ಮತ್ತು ಸ್ವಾತಂತ್ರ್ಯ', 'ಮುತ್ತಿನ ಪಲ್ಲಕ್ಕಿ' ಸಿನಿಮಾಗಳು ನಿರ್ಮಾಣವಾದವು. ಹುಲಿ ಚಂದ್ರಶೇಖರ್ ನಿರ್ದೇಶನದ ಧಾರಾವಾಹಿಗಳಿಗೆ ಕೆಲ ಕಾಲ ಸಂಭಾಷಣೆಯನ್ನು ಬರೆದೆ. ಇನ್ನು ಪತ್ರಿಕೋದ್ಯಮದ ಬಗ್ಗೆ ಹೇಳುವುದಾದರೆ, ಮೊದಲಿನಿಂದಲೂ ನನಗೆ ಪತ್ರಕರ್ತನಾಗಬೇಕೆಂಬ ಹಂಬಲ ತೀವ್ರವಾಗಿತ್ತು. ನಾನು 'ಮುಂಗಾರು' ಪತ್ರಿಕೆಯಲ್ಲಿನ ಕೆಲಸಕ್ಕಾಗಿ ಸಂದರ್ಶನಕ್ಕೂ ಹೋಗಿದ್ದೆ. ಅಷ್ಟೊತ್ತಿಗಾಗಲೇ ನಾನು ಕಥೆಗಾರನಾಗಿ ಒಂದಿಷ್ಟು ಹೆಸರು ಮಾಡಿದ್ದೆ. ವಡ್ಡರ್ಸೆ ರಘುರಾಮ ಶೆಟ್ಟರು ನನ್ನನ್ನು ಕರೆದು, 'ಈಗ ಏನು ಕೆಲಸ ಮಾಡುತ್ತಿದ್ದೀಯಾ' ಎಂದು ಕೇಳಿದರು. ನಾನು ಲೆಕ್ಚರರ್ ಎಂದು ಹೇಳಿದೆ. ಅದಕ್ಕೆ ಅವರು 'ಸದ್ಯ ಲೆಕ್ಚರರ್ ಆಗಿದ್ದೀಯಾ. ಜೊತೆಗೆ ಕಥೆಗಳನ್ನೂ ಬರೆಯುತ್ತಿದ್ದೀಯಾ. ಅದನ್ನೇ ಮುಂದುವರೆಸು. ಪತ್ರಕರ್ತನಾದರೆ ನಿನ್ನ ಕ್ರಿಯೇಟಿವ್ ರೈಟಿಂಗ್ ಸಫರ್ ಆಗುತ್ತದೆ' ಎಂದು ಬುದ್ಧಿವಾದ ಹೇಳಿಕಳಿಸಿದರು. ಅಲ್ಲಿಗೆ ಪತ್ರಕರ್ತನಾಗುವ ಆಸೆ ಬಿಟ್ಟೆ. ಆದರೆ ನನ್ನ ಬದುಕಿನುದ್ದಕ್ಕೂ ನಾನು ನಿರಂತರವಾಗಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದೇನೆ. ಕೆಲಸದಿಂದ ನಿವೃತ್ತನಾದ ನಂತರ ನಾನು 'ಒಕ್ಕಲ ಒನಪು' ಎನ್ನುವ ಮಾಸ ಪತ್ರಿಕೆಯನ್ನು ಒಂದಷ್ಟು ಕಾಲ ಹೊರತಂದೆನಾದರೂ ಅದು ಯಶಸ್ವಿಯಾಗಲಿಲ್ಲ.

◆ **ನೀವು ಒಮ್ಮೆ ತೆಲುಗಿನ ಮಹಾಕವಿ ಶ್ರೀಶ್ರೀಯವರನ್ನು ಒಮ್ಮೆ ಭೇಟಿ ಮಾಡಿದ್ದಿರಿ. ಆ ಪ್ರಸಂಗದ ಬಗ್ಗೆ ಹೇಳಿ.**

ಅದು 1975. ನಾನು ಬಿ.ಎ. ಅಂತಿಮ ವರ್ಷದಲ್ಲಿದ್ದೆ. 'ಮಹಾಪ್ರಸ್ಥಾನ' ಖ್ಯಾತಿಯ ತೆಲುಗು ಮಹಾಕವಿ ಶ್ರೀಶ್ರೀ ಬೆಂಗಳೂರಿಗೆ ಬಂದಿದ್ದರು. ಕ್ರಾಂತಿಕಾರಿ ಕವಿ ಎಂದೂ ಕೂಡ ಅವರು ಹೆಸರಾಗಿದ್ದರು. ಬಂಡಾಯದ ಹುಮ್ಮಸ್ಸಿನಲ್ಲಿದ್ದ ನಾನು ಅವರನ್ನು ಭೇಟಿ ಮಾಡಲು ಮೋತಿಮಹಲ್ ಹೋಟೆಲ್‌ಗೆ ಹೋದೆ. ನನಗೆ ತೆಲುಗು ಬರುತ್ತಿತ್ತಾದ್ದರಿಂದ ಅವರನ್ನು ತೆಲುಗಿನಲ್ಲೇ ಒಂದಷ್ಟು ಪ್ರಶ್ನೆಗಳನ್ನು ಕೇಳಿದೆ. ಅದರಲ್ಲಿ ಒಂದು ಪ್ರಶ್ನೆ ಹಾಗೂ ಅದಕ್ಕೆ ಅವರು ಕೊಟ್ಟ ಉತ್ತರ ಇವತ್ತಿಗೂ ಚೆನ್ನಾಗಿ ನೆನಪಿದೆ. 'ನೀವು ಒಂದು ಕಡೆ ಕ್ರಾಂತಿಕಾರಿ ಕಾವ್ಯ ಬರೀತಿದ್ದೀರಿ. ಇನ್ನೊಂದು ಕಡೆ ವ್ಯಾಪಾರಿ ಸಿನಿಮಾಗಳಿಗೆ ಹಾಡುಗಳನ್ನು ಬರೀತಿದ್ದೀರಿ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು' ಎಂದು ನಾನು ಕೇಳಿದೆ. ನನ್ನನ್ನೊಮ್ಮೆ ಇಡಿಯಾಗಿ ದಿಟ್ಟಿಸಿದ ಅವರು, 'ನೋಡಪ್ಪಾ, ನೀನಿನ್ನು ಹುಡುಗ. ಹೊಟ್ಟೆಗಿಲ್ಲದೇ ಬಂಡಾಯ ಮಾಡಕ್ಕಾಗಲ್ಲ. ಖಾಲಿ ಹೊಟ್ಟೆಯಲ್ಲಿ ಕ್ರಾಂತಿ ಮಾಡಕ್ಕಾಗಲ್ಲ. ನಾನು ನನ್ನ ಆತ್ಮತೃಪ್ತಿಗಾಗಿ ಕಾವ್ಯ ಬರೀತೀನಿ. ಹಣಕ್ಕಾಗಿ ಸಿನಿಮಾ ಹಾಡು ಬರೀತೀನಿ' ಎಂದು ಉತ್ತರಿಸಿದ್ದರು. ಅವರ ಆ ಮಾತು ನನಗೆ ಎಲ್ಲ ಕಾಲಕ್ಕೂ ಸಲ್ಲುವ ಜೀವನದ ಕಠೋರ ವಾಸ್ತವ ಅನ್ನಿಸಿತು.

◆ **ಕೊನೆಯದಾಗಿ, ಈಗೇನು ಬರೆಯುತ್ತಿದ್ದೀರಿ.**

ನಾನು ಮೂರೂವರೆ ದಶಕಗಳ ಕಾಲ ಕೇವಲ ಕಥೆಗಳನ್ನೇ ಬರೆದವನು; ಇದುವರೆಗೆ ಸುಮಾರು 500 ಕಥೆಗಳನ್ನು ಪ್ರಕಟಿಸಿದ್ದೇನೆ. ಇದೀಗ ಮೊದಲನೆಯ ಬಾರಿಗೆ ಕಾದಂಬರಿ ಬರವಣಿಗೆಯಲ್ಲಿ ತೊಡಗಿದ್ದೇನೆ. ಬಂಡವಾಳಶಾಹಿ ಹಾಗೂ ಜನಜೀವನದ ಮೇಲೆ ಅದರ ಪ್ರಭಾವ, ಪರಿಣಾಮದ ವಸ್ತುವಿಟ್ಟುಕೊಂಡು 'ಲಂಟಾನಾ' ಎನ್ನುವ ಕಾದಂಬರಿ; ಬಡವರು, ಕಾರ್ಮಿಕರು ಮುಂತಾದ ಜನವರ್ಗಗಳು ಹಾಗೂ ಪ್ರಭುತ್ವದ ನಡುವಿನ ಸಂಬಂಧ ಹಾಗೂ ಸಂಘರ್ಷ ಕುರಿತು 'ಥರ್ಡ್ ಎಸ್ಟೇಟ್' ಎನ್ನುವ ಕಾದಂಬರಿ—ಇವೆರಡರ ಬರವಣಿಗೆಯಲ್ಲಿ ತೊಡಗಿದ್ದೇನೆ. ಇಲ್ಲಿಂದ ನನ್ನ ಸಾಹಿತ್ಯಿಕ ಬದುಕಿನ ಹೊಸ ಮಜಲು ಆರಂಭವಾಗಲಿದೆ.